ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	34 (52)
ಸದಸ್ಯರ ಹೆಸರು	:	ಶ್ರೀ ಎಂ. ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	13.12.2021
ಉತ್ತರಿಸುವವರು	:	ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಅರಣ್ಯದಂಚಿನ ಹೊಲಗದ್ದೆಗಳಲ್ಲಿ ಬೆಳೆದ ಬೆಳೆಗಳನ್ನು, ಕಾಡುಪ್ರಾಣಿಗಳನ್ನು ನಾಶ ಮಾಡುತ್ತಿರುವುದರಿಂದ ರೈತರಿಗೆ ಆಗುತ್ತಿರುವ ನಷ್ಟಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಶಾಶ್ವತ ಪರಿಹಾರವನ್ನು ಕಂಡು ಹಿಡಿಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು)	ಬಂದಿದೆ. ವನ್ಯಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 1. ಕಾಡಾನೆಗಳನ್ನು ನಿಯಂತ್ರಿಸಲು ಕ್ಷಿಪ್ರ ಕಾರ್ಯ ಪಡೆ ತಂಡಗಳನ್ನು ರಚಿಸಿ, ಕಾಡಾನೆಗಳು ನಾಡಿಗೆ ಬಾರದಂತೆ ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ. 2. ಆನೆ ನಿರೋಧಕ ಕಂದಕನಿರ್ಮಾಣ. 3. 50% ಸಹಾಯಧನ (ಸಬ್ಸಿಡಿ) ಆಧಾರಿತ ಸೋಲಾರ್ ತಂತಿಬೇಲಿ ನಿರ್ಮಾಣ ಹಾಗೂ ನಿರ್ವಹಣೆ. 4. ಉಪದ್ರವಕಾರಿ ಪುಂಡಾನೆಗಳನ್ನು ಸೆರೆ ಹಿಡಿದು ಸ್ಥಳಾಂತರಿಸುವ ಕಾರ್ಯ 5. ಪಟಾಕಿ ಖರೀದಿಸಿ ರೈತರಿಗೆ ಹಂಚಿಕೆ ಮಾಡಿರುವುದು. 6. ಅರಣ್ಯದೊಳಗೆ ಅಟ್ಟಣಿಗೆಗಳ ನಿರ್ಮಾಣ. 7. ವೀಕ್ಷಣಾ ಗೋಪುರಗಳ ನಿರ್ಮಾಣ. 8. ವೀಕ್ಷಣಾ ರೇಖೆಗಳನಿರ್ವಹಣೆ 9. ಮಾನವ -ವನ್ಯಪ್ರಾಣಿಗಳ ಸಂಘರ್ಷ ನಿಯಂತ್ರಣದ ಬಗ್ಗೆ ರೈತರಿಗೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸುವ ಬಗ್ಗೆ ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

......2

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಆ)</td><td>ಕಳೆದ 3 ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಕಾಡುಪ್ರಾಣಿಗಳ ಹಾವಳಿಯಿಂದ ಎಷ್ಟು ಎಕರೆ ಬೆಳೆ ಹಾನಿಯಾಗಿದೆ; ಯಾವ ಯಾವ ಬೆಳೆಗಳು ಹಾನಿಯಾಗಿವೆ; ಸದರಿ ಹಾನಿಗಳಿಗೆ ಸರ್ಕಾರದಿಂದ ವಿತರಿಸಲಾದ ಪರಿಹಾರವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ವನ್ಯಪ್ರಾಣಿಗಳ ಹಾವಳಿಯಿಂದ ಆಲೂರು, ಸಕಲೇಶಪುರ, ಯಸಳೂರು ಮತ್ತು ಬೇಲೂರು ತಾಲ್ಲೂಕು / ವಲಯಗಳಲ್ಲಿ ಕಾಫಿ, ಕಾಳುಮೆಣಸು, ಏಲಕ್ಕಿ, ಬಾಳೆ, ಬತ್ತ ಹಾಗೂ ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ, ಅರಕಲಗೂಡು ತಾಲ್ಲೂಕು / ವಲಯಗಳಲ್ಲಿ ಮೆಕ್ಕಜೋಳ, ರಾಗಿ, ಆಲೂಗಡ್ಡೆ ಮುಂತಾದ ತರಕಾರಿ ಬೆಳೆಗಳು ಹಾನಿಯಾಗುತ್ತಿರುವುದು ವರದಿಯಾಗಿರುತ್ತದೆ.

ಮುಂದುವರೆದು, ಆದೇಶ ಸಂಖ್ಯೆ: ಅಪಜೀ 130 ಎಫ್‌ಡಬ್ಲ್ಯುಎಲ್ 2016, ಬೆಂಗಳೂರು, ದಿನಾಂಕ 19.09.2016 ರಂತೆ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆಹಾನಿ ಪ್ರಕರಣಗಳಲ್ಲಿ ಎಕ್ಸ್‌ಗ್ರೇಷಿಯಾ ಮೊತ್ತವನ್ನು ಸಂಖ್ಯೆ / ಕೆಜಿ ಲೆಕ್ಕದಲ್ಲಿ ಮೌಲ್ಯಮಾಪನ ಮಾಡಿ ನಿಗದಿಪಡಿಸಿದ ಪರಿಹಾರದ ಮೊತ್ತವನ್ನು ಪಾವತಿಸಲಾಗುತ್ತಿರುವುದರಿಂದ ಹೆಕ್ಟೇರು / ಎಕರೆ ಪ್ರಮಾಣದ ಹಾನಿಯ ವಿವರ ದಾಖಲಿಸಲಾಗುತ್ತಿರುವುದಿಲ್ಲ.

ಹಾಸನ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಪಾವತಿಸಲಾದ ದಯಾತ್ಮಕ ಧನದ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.</td></tr>
<tr><td>ಇ)</td><td>ಹಾಸನ ಜಿಲ್ಲೆಯಲ್ಲಿ ಕಾಡುಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು ರೂಪಿಸಿರುವ ಯೋಜನೆಗಳ ಯಾವುವು; ಇದಕ್ಕಾಗಿ ಸರ್ಕಾರ ಖರ್ಚು ಮಾಡಿರುವ ಅನುದಾನವೆಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಹಾಸನ ಜಿಲ್ಲೆಯಲ್ಲಿ ಕಾಡುಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು 2021-22ನೇ ಸಾಲಿನಲ್ಲಿ ರೂಪಿಸಿರುವ ಯೋಜನೆಗಳು ಹಾಗೂ ತಾಲ್ಲೂಕುವಾರು ಖರ್ಚು ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ಯೋಜನೆ</th><th>ತಾಲ್ಲೂಕು</th><th>ವೆಚ್ಚ (ರೂ.ಲಕ್ಷಗಳಲ್ಲಿ)</th></tr>
<tr><td rowspan="7">1)</td><td rowspan="7">ಪ್ರಾಕೃತಿಕ ವನ್ಯಜೀವಿ ಸಂರಕ್ಷಣೆ, ವನ್ಯಜೀವಿ ಆವಾಸಸ್ಥಾನಗಳ ನಿರ್ವಹಣೆ, ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ</td><td>ಆಲೂರು</td><td>6,64,300</td></tr>
<tr><td>ಬೇಲೂರು</td><td>85,000</td></tr>
<tr><td>ಸಕಲೇಶಪುರ</td><td>20,91,620</td></tr>
<tr><td>ಅರಕಲಗೂಡು</td><td>1,53,900</td></tr>
<tr><td>ಹೊಳೆನರಸಿಪುರ</td><td>2,35,000</td></tr>
<tr><td>ಅರಸೀಕೆರೆ</td><td>3,69,500</td></tr>
<tr><td>ಚನ್ನರಾಯಪಟ್ಟಣ</td><td>3,88,479</td></tr>
<tr><td colspan="3">ಒಟ್ಟು[A]</td><td>39,87,799</td></tr>
<tr><td rowspan="3">2)</td><td rowspan="3">Contract/ Outsource</td><td>ಆಲೂರು</td><td>31,03,475</td></tr>
<tr><td>ಬೇಲೂರು</td><td>3,17,832</td></tr>
<tr><td>ಸಕಲೇಶಪುರ</td><td>98,99,110</td></tr>
<tr><td colspan="3">ಒಟ್ಟು[B]</td><td>1,33,20,417</td></tr>
<tr><td rowspan="2">3)</td><td rowspan="2">ಆನೆಯೋಜನೆ-- Contract/ Outsource</td><td>ಬೇಲೂರು</td><td>1,05,948</td></tr>
<tr><td>ಸಕಲೇಶಪುರ</td><td>5,09,247</td></tr>
<tr><td colspan="3">ಒಟ್ಟು[C]</td><td>6,15,195</td></tr>
<tr><td>4)</td><td>ಪ್ರಾಕೃತಿಕ ವನ್ಯಜೀವಿ ಸಂರಕ್ಷಣೆ, ವನ್ಯಜೀವಿ ಆವಾಸಸ್ಥಾನಗಳ ನಿರ್ವಹಣೆ, ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ- ಸೌರತಂತಿ ಬೇಲಿ ನಿರ್ಮಾಣ</td><td>ಆಲೂರು [D]</td><td>1,45,000</td></tr>
<tr><td>5)</td><td>ಉಪಯೋಗಿತ ರೈಲ್ವೆಹಳಿಗಳ ಬ್ಯಾರಿಕೇಡ್ ನಿರ್ಮಾಣ ದಿಂದ ಮಾನವ-ಹತ್ಯೆ ಪ್ರಾಣಿ ಸಂಘರ್ಷ ನಿಯಂತ್ರಣ-</td><td>ಆಲೂರು [E]</td><td>1,10,26,998</td></tr>
<tr><td colspan="3">ಒಟ್ಟುಮೊತ್ತ[A+B+C+D+E]</td><td>2,90,95,409</td></tr>
</table>
</td></tr>
</table>

ಕ್ರ. ಸಂ.	ಪ್ರಶ್ನೆ	ಉತ್ತರ
		ಈ ಮೇಲ್ಕಂಡ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. 1. ಹಾಸನ ವಿಭಾಗ ವ್ಯಾಪ್ತಿಯಲ್ಲಿ ಬರುವ ಸಕಲೇಶಪುರ, ಆಲೂರು, ಅರಕಲಗೂಡು, ಬೇಲೂರು & ಯಸಳೂರು ವಲಯಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದು, ಸದರಿ ಕಾಡಾನೆಗಳನ್ನು ನಿಯಂತ್ರಿಸಲು ತಲಾ ನಾಲ್ಕು (4) ಜನರ ತಂಡದಂತೆ 21 ಕಾಡಾನೆಗಳನ್ನು ಹಿಮ್ಮೆಟ್ಟಿಸುವ ತಂಡಗಳು, ಐದು (5) ಕ್ಷಿಪ್ರ ಕಾರ್ಯಪಡೆ ತಂಡಗಳನ್ನು ರಚಿಸಿ, ಕಾಡಾನೆಗಳು ನಾಡಿಗೆ ಬಾರದಂತೆ ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯಕೈಗೊಳ್ಳಲಾಗುತ್ತಿದೆ. 2. ಆನೆ ನಿರೋಧಕ ಕಂದಕ ನಿರ್ಮಾಣ. 3. 50% ಸಹಾಯಧನ (subsidiary) ಆಧಾರಿತ ಸೋಲಾರ್ ತಂತಿ ಬೇಲಿ ನಿರ್ಮಾಣ. 4. ಉಪಯೋಗಿತ ರೈಲ್ವೆ ಹಳಿಗಳನ್ನು ಉಪಯೋಗಿಸಿ ರೈಲ್ವೆಬ್ಯಾರಿಕೇಡ್ ನಿರ್ಮಾಣ. 5. ಉಪದ್ರವ ಕಾರಿ ಪುಂಡಾನೆಗಳನ್ನು ಸೆರೆ ಹಿಡಿದು ಸ್ಥಳಾಂತರಿಸುವ ಕಾರ್ಯ. 6. ಪಟಾಕಿ ಖರೀದಿಸಿ ರೈತರಿಗೆ ಹಂಚಿಕೆ ಮಾಡಿರುವುದು. 7. ಅರಣ್ಯದೊಳಗೆ ಅಟ್ಟಣಿಗೆಗಳ ನಿರ್ಮಾಣ. 8. ವೀಕ್ಷಣಾ ಗೋಪುರಗಳ ನಿರ್ಮಾಣ. 9. ವೀಕ್ಷಣಾ ರೇಖೆಗಳ ನಿರ್ವಹಣೆ ಮಾನವ-ವನ್ಯಪ್ರಾಣಿಗಳ ಸಂಘರ್ಷ ನಿಯಂತ್ರಣದ ಬಗ್ಗೆ ರೈತರಿಗೆ, ಸಾರ್ವಜನಿಕರಿಗೆ ಅರಿವು ಮೂಡಿಸುವ ಬಗ್ಗೆ ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಸಂಖ್ಯೆ: ಅಪಜೀ 219 ಎಫ್‌ಡಬ್ಲ್ಯೂಎಲ್ 2021

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು

ಅನುಬಂಧ

ವಿಧಾನ ಸಭಾ ಸದಸ್ಯರಾದ ಶ್ರೀ ಎಂ. ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ 52								
ವಿಷಯ : ಅರಣ್ಯದಂಚಿನ ಹೊಲಗದ್ದೆಗಳಿಗೆ ಕಾಡುಪ್ರಾಣಿಗಳ ಹಾವಳಿ ಬಗ್ಗೆ (ರೂ.ಗಳಲ್ಲಿ)								
ಕ್ರ.ಸಂ	ಜಿಲ್ಲೆ	ತಾಲ್ಲೂಕು ವಿವರ	2018-19		2019-20		2020-21	
			ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	2	3	7	8	10	11	10	11
1	ಹಾಸನ	ಆಲೂರು	440	30,26,330	340	21,61,940	933	74,84,348
2		ಸಕಲೇಶಪುರ	484	32,54,095	597	41,12,427	1,227	94,60,446
3		ಯಸಳೂರು	463	28,91,640	939	54,70,052	743	43,11,077
4		ಬೇಲೂರು	0	0	102	10,15,115	62	11,22,108
5		ಹಾಸನ	59	3,05,460	83	8,67,244	112	5,76,439
6		ಅರಸೀಕೆರೆ	47	2,88,710	11	86,460	68	3,41,983
7		ಚೆನ್ನರಾಯಪಟ್ಟಣ	22	1,97,000	87	722500	83	5,58,168
8		ಹೊಳೆನರಸಿಪುರ	58	2,48,800	22	99,800	115	5,56,030
9		ಅರಕಲಗೂಡು	92	4,27,135	96	5,64,450	287	25,31,221
		ಒಟ್ಟು	**1,665**	**1,06,39,170**	**2,277**	**1,50,99,988**	**3,630**	**2,69,41,820**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು